ತರೀಕೆರೆ–ಮಂಗಳೂರು ಹಾಗೂ ಶಿವಮೊಗ್ಗ–ಕೊಪ್ಪ ರಸ್ತೆಗಳ ದುರಸ್ತಿ

45 (86): ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಿದ್ಧ ಯಾತ್ರಾ, ಸ್ಥಳ ಶೃಂಗೇರಿಗೆ ಸಂಪರ್ಕ ಕಲ್ಪಿಸುವ ತರೀಕೆರೆ–ಮಂಗಳೂರು ಹಾಗೂ ಶಿವಮೊಗ್ಗ–ಕೊಪ್ಪ ರಸ್ತೆಗಳು ಬಹಳ ದುಸ್ಥಿತಿಯಲ್ಲಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ದೇಶ ವಿದೇಶಗಳಿಂದ ಬರುವ ಯಾತ್ರಿಗಳು ಸಂಚಾರಿಸುವ ಈ ರಸ್ತೆಯನ್ನು ಉತ್ತಮವಾಗಿ ನಿರ್ವಹಿಸದಿದ್ದಲ್ಲಿ ರಾಜ್ಯಕ್ಕೆ ಕೆಟ್ಟ ಹೆಸರು ಬರುವುದಿಲ್ಲವೇ;

ಇ) ಪ್ರಸ್ತುತ ಸಾಲಿನಲ್ಲಿ ಈ ರಸ್ತೆಗಳು ಮರು ಡಾಂಬರೀಕರಣಕ್ಕಾಗಿ ಹಣ ಬಿಡುಗಡೆಗೊಳಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸಿದ್ಧ ಯಾತ್ರಾ, ಸ್ಥಳ ಶೃಂಗೇರಿಗೆ ಸಂಪರ್ಕ ಕಲ್ಪಿಸುವ ತರೀಕೆರೆ–ಮಂಗಳೂರು ಹಾಗೂ ಶಿವಮೊಗ್ಗ–ಕೊಪ್ಪ ರಸ್ತೆಗಳಲ್ಲಿ ಕೆಲವು ಭಾಗಗಳು ಹದಗೆಟ್ಟಿದ್ದು ಗಮನಕ್ಕೆ ಬಂದಿರುತ್ತದೆ.

ಆ) ಮೇಲಿನ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮ ಒಳಗೊಂಡಂತೆ ರಸ್ತೆ ಸುಧಾರಣೆಗೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಇ) ಪ್ರಸ್ತುತ ಸಾಲಿನಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಡಾಂಬರೀಕರಣ ಕಾರ್ಯಕ್ರಮವನ್ನು ಅನುದಾನ ಲಭ್ಯತೆಯನ್ನಾಧರಿಸಿ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಸಭಾಧ್ಯಕ್ಷರೇ, ಶೃಂಗೇರಿ ಒಂದು ಜಗತ್‌ಪ್ರಸಿದ್ಧವಾದ ಯಾತ್ರ ಕ್ಷೇತ್ರ, ಶೃಂಗೇರಿ ಕ್ಷೇತ್ರದಲ್ಲಿ ಓಡಾಡುವಂಥ ಎಲ್ಲಾ ರಸ್ತೆಗಳು ಬಹಳ ಹದಗೆಟ್ಟಿವೆ ಎಂದು ಕೇಳಿದ್ದೆ. ಸನ್ಮಾನ್ಯ ಸಚಿವರು ಇದು ಅವರ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಜೊತೆಗೆ ಈ ಗುಂಡಿಗಳನ್ನು ಮುಚ್ಚುವಂಥ ಕಾರ್ಯ ಮಾಡುತ್ತೇವೆ ಎಂದು ಹೇಳಿದ್ದಾರೆ. ಗುಂಡಿಗಳನ್ನು ಮುಚ್ಚುವುದಕ್ಕೆ ಅವರು ಏನು ಹಣ ಕೊಟ್ಟಿದ್ದಾರೆ, ಅದು ರಸ್ತೆಗಳಲ್ಲಿ ಗುಂಡಿಗಳು ಇದ್ದಿದ್ದರೆ ಮುಚ್ಚಲಿಕ್ಕೆ ಸಾಕಾಗುತ್ತಿತ್ತು. ಆದರೆ ಗುಂಡಿಗಳಲ್ಲೇ ರಸ್ತೆ ಇರುವುದರಿಂದ ಅದು ಸಾಕಾಗುವುದಿಲ್ಲ. ಇದನ್ನು ಸ್ವಲ್ಪ ಹೆಚ್ಚು ಮಾಡಿಕೊಡಬೇಕೆಂದು ಹೇಳಿ ಅವರ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ. ಜೊತೆಗೆ ಇದು ರಾಜ್ಯದಲ್ಲಿ ಮೂರು ತಾಲ್ಲೂಕುಗಳನ್ನು ಒಳಗೊಂಡಿರುವಂಥಾದ್ದು ಶೃಂಗೇರಿ ಒಂದೇ ಕ್ಷೇತ್ರವಾಗಿದೆ. ಮೂರು ಪೂರ್ಣ ತಾಲ್ಲೂಕುಗಳು ಈ ಒಂದೇ ಕ್ಷೇತ್ರದಲ್ಲಿ ಇರುವುದರಿಂದ ಅದಕ್ಕೆ ಸಂಪರ್ಕಕ್ಕೆ ಬೇಕಾಗಿರುವಂಥ ರಸ್ತೆಗಳನ್ನು ಆದಷ್ಟು ಜಾಗ್ರತೆ ಮುಗಿಸಿಕೊಡಬೇಕೆಂದು ನಾನು ಅವರನ್ನು ಕೇಳಿದ್ದೇನೆ. ಅವರೂ ಕೂಡ ಒಪ್ಪಿದ್ದಾರೆ. ಅತಿಶೀಘ್ರವಾಗಿ ಇದನ್ನು ಮಾಡಿಕೊಡುತ್ತಾರೆ ಎಂದು ನಾನು ನಂಬುತ್ತೇನೆ. ಜೊತೆಗೆ ಇಲ್ಲಿಗೆ ವಿದೇಶಿ ಪ್ರವಾಸಿಗರು ತುಂಬಾ ಜನ ಬರುತ್ತಿರುವುದರಿಂದ ಈ ರಾಜ್ಯದ ಬಗ್ಗೆಯೇ ಜನರು ತಪ್ಪು ತಿಳಿದುಕೊಳ್ಳುವಂಥ ಪರಿಸ್ಥಿತಿ ಬರುತ್ತದೆ. ಶಿವಮೊಗ್ಗದಿಂದ ರೈಲಿನಲ್ಲಿ ಬಂದವರು ಶೃಂಗೇರಿಗೆ

ಇದೇ ರಸ್ತೆಯಲ್ಲಿ ಬರಬೇಕಾಗಿರುವುದರಿಂದ ಇದನ್ನು ಶೀಘ್ರಗತಿಯಲ್ಲಿ ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಜೊತೆಗೆ ಇಲ್ಲಿ ಹತ್ತು ಚಕ್ರವಾಹನಗಳು ತುಂಬಾ ಬರುತ್ತಿವೆ. ಗಣಿಯ ವಾಹನಗಳು ಬರುತ್ತವೆ ಮತ್ತು ಬಿದಿರನ್ನು ತೆಗೆದುಕೊಂಡು ಹೋಗುವಂತಹ, ಟಿಂಬರ್ ವಾಹನಗಳು ಈ ರಸ್ತೆಯಲ್ಲಿ ಮಳೆಗಾಲದಲ್ಲಿ ಓಡಾಡುತ್ತಿರುವುದರಿಂದ ತೊಂದರೆಯಾಗಿದೆ. ಅವುಗಳನ್ನು ಮಳೆಗಾಲ ಕಳೆಯುವವರೆಗಾದರೂ ತಾತ್ಕಾಲಿಕವಾಗಿ ತಡೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮತ್ತು ಶೃಂಗೇರಿ ಭಾಗದಲ್ಲಿ ಈಗಾಗಲೇ ಕೆಲವು ಧಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಕೆಲಸವನ್ನು ನಾನು ಮಾಡಿಸುತ್ತೇನೆ.

ಆ) ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು (ಅನುಬಂಧ I)

1. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 3ನೇ ಪಟ್ಟಿಯಲ್ಲಿರುವ 42 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. (ಅನುಬಂಧ II)

ಅಧ್ಯಕ್ಷರು : ಮಂಡಿಸಲಾಯಿತು.

ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಬೆಂಗಳೂರಿನ ನಾಗರಭಾವಿ ಪೋಲೀಸ್ ಸ್ಟೇಷನಲ್ಲಿ ಧನಂಜಯ ಎನ್ನುವ ವ್ಯಕ್ತಿ ಅಮಾನುಷವಾಗಿ ಸತ್ತಿರುವುದರ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಬೆಂಗಳೂರಿನ ನಾಗರಭಾವಿ ಪೊಲೀಸ್ ಸ್ಟೇಷನ್‌ನಲ್ಲಿ ಧನಂಜಯ ಎನ್ನುವ ವ್ಯಕ್ತಿ ಅಮಾನುಷವಾಗಿ ಸತ್ತಿದ್ದಾನೆ. ಇದು ಒಂದು ಲಾಕಪ್ ಸಾವು. ಇವತ್ತಿನ ದಿವಸಗಳಲ್ಲಿ ರಾಜ್ಯದಾದ್ಯಂತ ಈ ರೀತಿಯ ಲಾಕಪ್ ಸಾವುಗಳು ನಿರಂತವಾಗಿ ನಡೆಯುತ್ತಿವೆ. ಹಿಂದೆ ಇಂತಹ ಒಂದು ಸಣ್ಣ ವಿಚಾರ ಬಂದಾಗಲೂ ಸದನದಲ್ಲಿ ಕೋಲಾಹಲ ನಡೆದ ನಿದರ್ಶನಗಳು ಉಂಟು. ಬಹುಶಃ ಲಾಕಪ್ ಸಾವಿನ ಬಗ್ಗೆ ಪರಿಣಾಮಕಾರಿಯಾದಂಥ, ಸಮಗ್ರವಾದಂಥ ತನಿಖೆ ಆಗಬೇಕಾಗುತ್ತದೆ. ರಾತ್ರಿ ಹತ್ತೂವರೆ ಗಂಟೆಗೆ ಓಡಾಡುತ್ತಿದ್ದರು ಎಂದು ಹೇಳುತ್ತಾರೆ, ಅವರು ಕುಡಿದಿದ್ದರು ಎಂದು ಹೇಳುತ್ತಾರೆ. ಅವರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋದರು ಎಂದು ಹೇಳುತ್ತಾರೆ.

ಲಾಕಪ್‌ನಲ್ಲಿ ಗಾಜನ್ನು ಒಡೆದು ಆ ಗಾಜಿನಲ್ಲಿ ತನ್ನ ಹೊಟ್ಟೆಯನ್ನು ತಿವಿದುಕೊಂಡು ಸತ್ತ ಎನ್ನತಕ್ಕಂಥಾದ್ದು ಇದು. ಅವರು ಹೇಳತಕ್ಕಂಥಾದ್ದು, ಇದು ಸತ್ಯ ಅಲ್ಲ. ಅಪ್ರಾಮಾಣಿಕವಾದ ಹೇಳಿಕೆಯನ್ನು ಪೊಲೀಸರು ನೀಡಿದ್ದಾರೆ. ಇದು ನಿಜಕ್ಕೂ ಪೊಲೀಸ್ ರಾಜ್ಯವನ್ನು ನಾಚಿಸುವಂತಹ ಪೋಲೀಸ್ ರಾಜ್ಯವೇ ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ. ತಮಗೆ ನಾನು ಹೇಳುತ್ತಿದ್ದೇನೆ, ಬಹಳ